# ಸುದ್ದಿ ಸಂಚಯ



ಸುನಾಮಿ ಸಂತ್ರಸ್ತರಿಗೆ ರಾಮಕೃಷ್ಣ ಮಿಷನ್ನಿನಿಂದ ಒದಗಿಸಲಾದ ಒಂದು ಯಾಂತ್ರಿಕ ದೋಣಿ. ಅದರಲ್ಲಿ ಹಿರಿಯ ಸ್ವಾಮೀಜಿಯವರನ್ನು ಕಾಣಬಹುದು.

✣ **ಅಸ್ಸಾಂ** ರಾಜ್ಯದ ಪ್ರಸಿದ್ಧ ತೀರ್ಥಕ್ಷೇತ್ರ ಕಾಮಾಖ್ಯಾದೇವಿಯ ದೇವಸ್ಥಾನದಲ್ಲಿ ನಡೆದ ಅಂಬುಬಾಚಿ ಉತ್ಸವದ ಸಮಯದಲ್ಲಿ ಗುವಾಹಟಿಯಲ್ಲಿರುವ ರಾಮಕೃಷ್ಣ ಕೇಂದ್ರವು ೨೨ರಿಂದ ೨೫ ಜೂನ್ ವರೆಗೆ ಉಚಿತ ವೈದ್ಯೋಪಚಾರ ನೀಡಿ ೩೫೨೩ ರೋಗಿಗಳಿಗೆ ಸೇವೆ ಸಲ್ಲಿಸಿದೆ.

✣ **ಕಾಮಾರಪುಕುರ,** ಲಕ್ನೌ, ಅಲಸೂರು ಹಾಗೂ ವಿಶಾಖಪಟ್ಟಣದ ಕೇಂದ್ರಗಳು ಮೇ ಹಾಗು ಜೂನ್ ತಿಂಗಳುಗಳಲ್ಲಿ ೨೬೫ ರೋಗಿಗಳಿಗೆ ಉಚಿತವಾಗಿ ಕಣ್ಣಿನ ಶಸ್ತ್ರಚಿಕಿತ್ಸೆಯ ಸೇವೆಯನ್ನು ಮಾಡಿವೆ.

✣ **ಜುಲೈ** ೪ರಂದು ರಾಮಕೃಷ್ಣ ಮಿಷನ್ ವಿವೇಕಾನಂದ ಶೈಕ್ಷಣಿಕ ಮತ್ತು ಸಂಶೋಧನಾ ಸಂಸ್ಥೆ—ಯು.ಜಿ.ಸಿ. ಕಾಯಿದೆಯಡಿಯ ಪರಿಗಣಿತ ವಿಶ್ವವಿದ್ಯಾನಿಲಯದ ಉದ್ಘಾಟನೆಯಾಯಿತು. ರಾಮಕೃಷ್ಣ ಮಹಾಸಂಘದ ಮುಖ್ಯ ಕಾರ್ಯಾಲಯ, ಬೇಲೂರು ಮಠದಲ್ಲಿರುವ ವಿವೇಕಾನಂದ ಸಭಾಗೃಹದಲ್ಲಿ ಬೆಳಿಗ್ಗೆ ೧೦.೧೫ಕ್ಕೆ ಪ್ರಾರಂಭವಾದ ಕಾರ್ಯಕ್ರಮದಲ್ಲಿ ರಾಮಕೃಷ್ಣ ಮಹಾಸಂಘದ ಪರಮಾಧ್ಯಕ್ಷರಾದ ಪರಮ ಪೂಜ್ಯ ಶ್ರೀಮತ್ ಸ್ವಾಮಿ ಗಹನಾನಂದಜಿ ಮಹಾರಾಜ್ ಹಾಗೂ ಉಪಾಧ್ಯಕ್ಷರಾದ ಶ್ರೀಮತ್ ಸ್ವಾಮಿ ಆತ್ಮಸ್ಥಾನಂದಜಿ ಮಹಾರಾಜ್ ಭಾಗವಹಿಸಿ ಆಶೀರ್ವಚನ ನೀಡಿದರು. ಈ ವಿಶ್ವವಿದ್ಯಾನಿಲಯದಲ್ಲಿ, ಭಾರತದ ಇತರೆ ವಿಶ್ವವಿದ್ಯಾನಿಲಯಗಳ ಪಠ್ಯಕ್ರಮಗಳಲ್ಲಿ ಇಲ್ಲದಿರುವ ಅಥವಾ ಪ್ರಾಮುಖ್ಯತೆಯನ್ನು ಪಡೆಯದ ಕ್ಷೇತ್ರಗಳಾದ ಸ್ವಾವಲಂಬನ ಶಿಕ್ಷಣ, ವಿಪತ್ತಿನ ನಿರ್ವಹಣೆ—ಪರಿಹಾರ, ಸಾಂಸ್ಕೃತಿಕ ಹಾಗೂ ನೈತಿಕ ಸಂಪನ್ಮೂಲಗಳ ಮೌಲ್ಯಾಧಾರಿತ ಶಿಕ್ಷಣಗಳಿಗೆ ವಿಶೇಷವಾದ ಒತ್ತನ್ನು ನೀಡಲಾಗುತ್ತದೆ.



ಪರಮಪೂಜ್ಯ ಗಹನಾನಂದಜಿ ಮಹಾರಾಜ್ ಅವರು ಸ್ಮರಣಸಂಚಿಕೆಯನ್ನು ಬಿಡುಗಡೆ ಮಾಡುತ್ತಿರುವುದು.

ಅದೇ ದಿನದಂದು ಮಧ್ಯಾಹ್ನ ೧೨.೩೦ಕ್ಕೆ ಕೊಲ್ಕತಾದಲ್ಲಿರುವ ಸ್ವಾಮಿ ವಿವೇಕಾನಂದರ ಜನ್ಮಸ್ಥಳದಲ್ಲಿ ನಿರ್ಮಿತವಾಗಿರುವ ವಿವೇಕಾನಂದ ಸಂಶೋಧನಾ ಕೇಂದ್ರದ ಉದ್ಘಾಟನೆಯಾಯಿತು. ರಾಮಕೃಷ್ಣ ಮಹಾಸಂಘದ ಉಪಾಧ್ಯಕ್ಷರಾದ ಶ್ರೀಮತ್ ಸ್ವಾಮಿ ಗೀತಾನಂದಜಿ ಮಹಾರಾಜ್ ಆಶೀರ್ವಚನವನ್ನು ನೀಡಿದರು.

✣ ವಿವೇಕಾನಂದ ಇನ್‌ಸ್ಟಿಟ್ಯೂಟ್ ಫಾರ್ ಲೀಡರ್‌ಷಿಪ್ ಡೆವಲಪ್‌ಮೆಂಟ್—ಲಾಭರಹಿತ ಸ್ವಯಂಸೇವಾಸಂಸ್ಥೆಗಳ ನಿರ್ವಹಣೆಯ ಸ್ನಾತಕೋತ್ತರ ಪದವಿ ಹಾಗೂ ಡಿಪ್ಲೋಮಾ ಕೋರ್ಸ್ ಪ್ರಾರಂಭಕ್ಕೆ ಸಂಬಂಧಿಸಿದಂತೆ ಮೈಸೂರು ವಿಶ್ವವಿದ್ಯಾನಿಲಯದೊಂದಿಗೆ ಶೈಕ್ಷಣಿಕ ಒಪ್ಪಂದಕ್ಕೆ ಜುಲೈ ೪, ೨೦೦೫ರಂದು ಸಹಿ ಹಾಕಿದೆ. ಎರಡು ದಶಕಗಳಿಗಿಂತಲೂ ಹೆಚ್ಚಾಗಿ ಸೇವಾಕಾರ್ಯಗಳಲ್ಲಿ ವ್ಯಾಪಕವಾಗಿ ದುಡಿಯುತ್ತಿದ್ದು ಸೇವಾಕ್ಷೇತ್ರದಲ್ಲಿ ನಿಪುಣರಾದವರೊಡನೆ ಸ್ನೇಹ ಸಂಪರ್ಕದಿಂದ ವಿಕಸಿತಗೊಂಡ ಮೈಸೂರು ಜಿಲ್ಲೆಯ ಹೆಚ್.ಡಿ. ಕೋಟೆ ತಾಲ್ಲೂಕಿನ ಸರಗೂರಿನಲ್ಲಿ ತನ್ನ ಪ್ರಧಾನ ಕೇಂದ್ರವನ್ನು ಹೊಂದಿರುವ **ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್** ಎಂಬ ಲಾಭರಹಿತ ನೋಂದಾಯಿತ ಸ್ವಯಂಸೇವಾಸಂಸ್ಥೆಯಿಂದ ಈ ಸಂಸ್ಥೆಯು ಆರಂಭಿಸಲ್ಪಟ್ಟಿದೆ.

ಮೈಸೂರು ವಿಶ್ವವಿದ್ಯಾನಿಲಯದ ಪರವಾಗಿ ಕುಲಸಚಿವ ಎನ್.ಡಿ. ತಿವಾರಿ ಮತ್ತು ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಪರವಾಗಿ ಸಂಸ್ಥೆಯ ನಿರ್ದೇಶಕ ಡಾ. ಎಂ. ಎ ಬಾಲಸುಬ್ರಮಣ್ಯಂ ಸಹಿ ಹಾಕಿದರು. ಇಂತಹ ಐತಿಹಾಸಿಕ ಮೆಮೊರಾಂಡವ್ ಲಾಭೋದ್ದೇಶ ರಹಿತ ನಿರ್ವಹಣಾತಜ್ಞರನ್ನು ತಯಾರಿಸುವಲ್ಲಿ ಒಂದು ಮೈಲುಗಲ್ಲಾಗಿದೆ. ಸೇವಾಕಾರ್ಯಕ್ಕೆ ಬದ್ಧರಾಗಿದ್ದು, ಕಾರ್ಯನೈಪುಣ್ಯತೆಯನ್ನು ಬೆಳೆಸಿಕೊಂಡು ಅನೇಕ ಅಭಿವೃದ್ಧಿ ಸಂಸ್ಥೆಗಳಾದ ಸ್ವಯಂಸೇವಾಸಂಸ್ಥೆ, ಸಹಕಾರ ವಲಯಗಳು, ಸಾರ್ವಜನಿಕ ವಲಯಗಳ ಮೂಲಕ ಸೇವಾನಿರತರಾಗಿ ರಾಷ್ಟ್ರನಿರ್ಮಾಣದಲ್ಲಿ ತೊಡಗಲು ಯುವಜನತೆಗೆ ಒಂದು ಅಪೂರ್ವ ಅವಕಾಶವನ್ನು ಈ ಸಂಸ್ಥೆ ಕಲ್ಪಿಸಿದೆ.

ಕೋರ್ಸ್‌ನ ಬಗ್ಗೆ ಮಾಹಿತಿ ನೀಡಿದ ಸಂಸ್ಥೆಯ ಅಧ್ಯಕ್ಷ ಡಾ.ಆರ್. ಬಾಲಸುಬ್ರಮಣ್ಯಂ, 'ಪ್ರಸಕ್ತ ವರ್ಷದಿಂದಲೇ ಈ ಕೋರ್ಸ್ ಪ್ರಾರಂಭವಾಗುತ್ತಿದ್ದು ಇದು ದೇಶದಲ್ಲೇ ಮೊದಲು' ಎಂದರು. ಈ ಸಂದರ್ಭದಲ್ಲಿ ರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಸ್ವಾಮಿ ಆತ್ಮವಿದಾನಂದಜೀ, ಡಾ. ಪ್ರಭುಶಂಕರ್ ಮತ್ತಿತರರು ಮಾತನಾಡುತ್ತ, 'ಸೇವಾ ಭಾವನೆಯಿಂದ ಪ್ರೇರಿತರಾದ ಸಿಂಹಹೃದಯದ ಸಹಸ್ರ ಸಹಸ್ರ ಯುವಕ ಯುವತಿಯರು ಈ ದೇಶವನ್ನು ಪರಿವರ್ತಿಸಬಲ್ಲರು' —ಎಂಬುದು ಸ್ವಾಮಿ ವಿವೇಕಾನಂದರ ಭವ್ಯ ಕನಸಾಗಿತ್ತು ಎಂದು ನುಡಿದರು.

✣ **ಬಿಹಾರದ** ದೇವಘರ್‌ನಲ್ಲಿರುವ ರಾಮಕೃಷ್ಣ ಮಿಷನ್ ವಿದ್ಯಾಪೀಠದ ಪದವಿಪೂರ್ವ ಕಾಲೇಜಿನ ದ್ವಿತೀಯ ಪಿ.ಯು.ಸಿ. ವಿದ್ಯಾರ್ಥಿಯು ಬನಾರಸ್ ಹಿಂದೂ ವಿಶ್ವವಿದ್ಯಾನಿಲಯವು ನಡೆಸಿದ ಅಖಿಲಭಾರತ ವೈದ್ಯಕೀಯ ಪ್ರವೇಶ ಪರೀಕ್ಷೆಯಲ್ಲಿ ಪ್ರಥಮಸ್ಥಾನ ಗಳಿಸಿದ್ದಾನೆ.